ಕಾಫಿ ನನಗೆ ಸುಡುಸುಡುತ್ತ ಇರಬೇಕು. ತುಟಿಗಿಟ್ಟರೆ ಚುರುಕ್ಕನ್ನಬೇಕು... ಅಂಡ್ ಐ ಲೈಕ್ ದಿ ಕಾಫಿ ಹಿಅರ್...'

'ಐ ಸೀ!ಈಗ ಮಾತನಾಡೋದು ನಿನ್ನ ಸರದಿ... ನಾನೇನೂಂತ ಚೆನ್ನಾಗಿ ಗೊತ್ತು ಅಂತೀಯಲ್ಲ, ಆ ಬಗ್ಗೆ ವಿಸ್ತರಿಸಿ ಹೇಳು...'

'ಉಮ್ಮ್... ಎಲ್ಲಿಂದ ಸುರು ಮಾಡಲಿ? ಧೈರ್ಯ ಮಾಡಿ ಹೇಳೇಬಿಡುತೀನಿ... ನಿನಗೆ ಮೋಹನಸ್ವಾಮಿ ಗೊತ್ತಲ್ಲವಾ?'

'ವ್ವ್... ವ್ವಾಟ್?! ಹೂ ಈಸ್ ದಟ್?!!'

'ಲಯರ್! ಮೋಜುಗಾರ ಅನ್ನುವಷ್ಟೇ ಸುಳ್ಳುಗಾರ ನೀನು... ನಿನಗೆ ಅವನು ಚೆನ್ನಾಗಿ ಗೊತ್ತು!'

'ವ್ವಾಟ್ ನಾನ್ಸೆನ್ಸ್! ನನಗೆ ಈ ಹೆಸರಿನ ಯಾರೂ ಗೊತ್ತಿಲ್ಲ...'

'ಸರಿ. ಯಾರೂಂತ ನಾನೇ ಹೇಳಿಬಿಡುತೀನಿ... ಮೋಹನಸ್ವಾಮಿ ಕನ್ನಡ ಕತೆಗಳಲ್ಲಿನ ಅದ್ವಿತೀಯ ಮನುಷ್ಯಪಾತ್ರ! ಒನ್ನಂಡ್ ಓನ್ಲೀ ಅಂತಾರಲ್ಲ ಅಂಥವನು... ಹೀ ಈಸ್ ಫೆನಾಮೆನಲ್! ಫಸ್ಟ್ ಆಫ್ ಹಿಸ್ ಕೈಂಡ್ ಇನ್ ಕನ್ನಡ! ಅವನು ಹಾರ್ಪರ್ ಕಾಲಿನ್ಸ್ ಮುಖೇನ ಈಗ ಇಂಗ್ಲಿಶಿನಲ್ಲು ಬರುತಿದ್ದಾನೆ... ಅಂಡ್ ಹಿ ಈಸ್ ಗೇ!'

'ಸೋ?! ವ್ವಾಟಬೌಟ್ ಹಿಮ್?'

'ವೆಲ್ಲ್... ಮೋಹನಸ್ವಾಮಿ ಒಂದು ಪಾತ್ರ ಅನ್ನೋದನ್ನ ಇನ್ನೊಮ್ಮೆ ಒತ್ತೊತ್ತಿ ಹೇಳುತೀನಿ. ಅಂದರೆ ಅವನೊಂದು ರೂಪಕ ಅಷ್ಟೆ. ನಾನೂ ಒಂದು ರೂಪಕ... ಬಹುಶಃ ಬಿಡಾಡಿಯಾಗಿರೋ ನೀನೂ ಒಂದು ರೂಪಕ... ಅಂದರೆ ವಿ ಆರ್ ಆಲ್ ಮೆಟಫರಿಕಲೀ ಕನೆಕ್ಟೆಡ್...'

'ನೀನು ಹೇಳೋದೇನೂ ಅರ್ಥವಾಗುತಿಲ್ಲ... ಒಡಪೊಡಪಾಗಿ ಆಡುತೀಯಲ್ಲೇ, ಹೆಣ್ಣೆ!!'

'ಕಳ್ಳ ಕಳ್ಳ! ಗೊತ್ತಿದೆ ಅಂತ ಹೇಳಿಬಿಡು... ಮೋಹನಸ್ವಾಮಿ ನಿನಗೆ ಗೊತ್ತೂಂತ ನನಗೆ ಚೆನ್ನಾಗಿ ಗೊತ್ತು!'

'...!!!'

'ನಿನ್ನೆ ಅಲ್ಲ ಮೊನ್ನೆ ನನಗವನು ಸಿಕ್ಕಿದ್ದ... ನೀನು ಕಳೆದ ಭಾನುವಾರ ಸಂಜೆ ಅವನೊಟ್ಟಿಗಿದ್ದೆಯಂತೆ!!'

'...!!!'

'ಹೇಳಿಬಿಡು... ನಿನ್ನ ಮುಖ ನೋಡಿದರೆ ಗೊತ್ತಾಗುತ್ತೆ. ನಾನು ಹೇಳಿದ್ದು ನಿಜ ತಾನೆ? ನಿನಗೂ ಅವನಿಗೂ ಹಳೆಯ ಪರಿಚಯ... ಬೆಂಗಳೂರಿಗೆ ಬಂದಾಗಲೆಲ್ಲ ಅಲ್ಲಲ್ಲ, ಆಗೀಗೊಮ್ಮೆ ಅವನನ್ನು ಭೇಟಿ ಮಾಡುತೀಯೆ. ಮೊನ್ನೆ ಭಾನುವಾರವೂ ಅವನೊಡಮಲಗಿ ಮೈಬೆರೆಸಿದೆಯಂತೆ??'

'ಹೇ... ಯಾರು ನೀನು? ಯಾರೇ ನೀನು?! ವೈ ಆರ್ಯು ಸೋ ಇಂಟ್ರುಸಿವ್ ಇನ್ ಅದರ್ಸ್ ಲೈವ್ಸ್? ನಿನಗೆ ನನ್ನ ಬದುಕೊಳಗಿಣಿಕುವ ಅಧಿಕಾರ ಕೊಟ್ಟಿದ್ದು ಯಾರು? ಬ್ಲಡೀ ಬಿಚ್ಚ್... ಕಳ್ಳಸೂಳೆ ನೀನು! ಯಾರೇ ನೀನು?! ಯಾಕೇ ನನ್ನನ್ನು ಕದ್ದಾಲಿಸಿದ್ದು? ಕದ್ದು ಕದ್ದು ಕಂಡಿದ್ದು... $%#@###$$$@#.... ಕಳ್ಳ ಭೋಸುಡಿ...'

'...'